453 ಶೀ.ಸಿ.ಆರ್.ಸಗೀರ್ ಅಹಮದ್: ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಉರ್ದು ಶಾಲೆಗಳ ಸಂಖ್ಯೆ ಎಷ್ಟು(ಜಿಲ್ಲಾವಾರು ಮಾಹಿತಿ ನೀಡುವುದು?);

ಆ) ಉರ್ದು ಶಾಲೆಗಳಲ್ಲಿ ನೇಮಿಸಿರುವ ಕನ್ನಡ ಶಿಕ್ಷಕರ ಸಂಖ್ಯೆ ಎಷ್ಟು? ಹಾಗೂ ಖಾಲಿ ಇರುವ ಕನ್ನಡ ಶಿಕ್ಷಕರ ಹುದ್ದೆ ಎಷ್ಟು;

ಇ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮೊದಲು ಸರ್ಕಾರವು ಕೈ ಗೊಳ್ಳುವ ಕ್ರಮವೇನು?

ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣಸಚಿವರು.)

ಅ) ಉರ್ದು ಪ್ರಾಥಮಿಕ ಶಾಲೆಗಳು- 2965

ಉರ್ದು ಪ್ರಾಥಮಿಕ ಶಾಲೆಗಳು -181

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.

	ಪ್ರಾಥಮಿಕ	ಪ್ರೌಢ
ಆ) ನೇಮಿಸಿರುವ ಕನ್ನಡ ಶಿಕ್ಷಕರ ಸಂಖ್ಯೆ	- 2653	54
ಖಾಲಿ ಇರುವ ಕನ್ನಡ ಶಿಕ್ಷಕರ ಹುದ್ದೆಗಳ ಸಂ-9		2

ಇ) ಸದ್ಯದಲ್ಲಿಯೇ ತುಂಬಲಾಗುವುದು.

ಹೆಚ್.ಜಿ.ಗೋವಿಂದೇಗೌಡ
ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅದಕ್ಕೇ ಅವರಂತೆ ಮೊದಲೇ ಹೇಳುವುದು. ನಮ್ಮ ಕರೆಂಟ್ ಹೇಗಿದೆ ಮುಟ್ಟಿ ನೋಡಿ ಎಂದು ಹೇಳುತ್ತಾರೆ. ಕಾಂಗ್ರೆಸ್ ಕರೆಂಟ್ ಮುಟ್ಟಿ ನೋಡಿದರೆ ಗೊತ್ತಾಗುತ್ತದೆ.

ಅಧ್ಯಕ್ಷರು:- ಅವರ ಪವರ್‌ಗೆ ನೀವು ಟ್ರಾನ್ಸ್‌ಫಾರ್ಮರ್. ವೋಲ್ಟೇಜ್ ಸರಿ ಇಲ್ಲದಿದ್ದರೆ ಏನೂ ಮಾಡಲಾಗುವುದಿಲ್ಲ. ನಾನೇನು ಮಾಡುವುದಕ್ಕಾಗುತ್ತದೆ.?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೀವೇನೋ ನಮ್ಮ ಪರವಾಗಿಯೇ ಇದ್ದೀರಿ ಎಂದು ಹೇಳಿದರೆ ಕೊನೆಕೊನೆಗೆ ನೀವು ಅವರ ಪರವೇ ಆಗಿಬಿಟ್ಟಿರಿ. ಈಗ ಅದರಿಂದ ನಮಗೆ ಕಷ್ಟ ಬಂದಿದೆ. ನೀವು ಏನೋ ಈ ಕಡೆ ಬಂದ ಹಾಗೆ ಮಾಡುತ್ತೀರಿ ನಾವು ಪರವಾಗಿಲ್ಲ ನಮ್ಮ ಕಡೆಗೆ

ಬಂದಿದ್ದಾರೆಂದು ಹೇಳುವ ವೇಳೆಗೆ ಮತ್ತೆ ಈ ಕಡೆಗೆ ಹೋಗುತ್ತೀರು. ಜಾರಿಬಿಡುತ್ತೀರಿ.

ಅಧ್ಯಕ್ಷರು:- ಇಲ್ಲ ನಾನು ಸೆಂಟರಿನಲ್ಲಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅವರ ಅವರ ಪವರ್‌ಗೆ ಇವರು ಟ್ರಾನ್ಸ್‌ಫಾರ್ಮರ್ ಆ ಟ್ರಾನ್ಸ್‌ಫಾರ್ಮರ್‌ಗೆ ಮಾನ್ಯ ವೈ.ರಾಮಕೃಷ್ಣರವರು ಆಗಾಗ ಫ್ಯೂಸ್ ಕಿತ್ತು ಹಾಕುತ್ತಾರೆ.

ಅಧ್ಯಕ್ಷರು:- ನೀವು ಪಕ್ಕದಲ್ಲಿ ಇದ್ದೀರಲ್ಲಾ ಅಲರ್ಟ್‌ಗಿದ್ದು ಅದು ಆಗದ ಹಾಗೆ ನೋಡಿಕೊಳ್ಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಯಾವಾಗಲೂ ಅವರ ಕೆಲಸ ಫ್ಯೂಸ್ ಕೈಯಲ್ಲಿ ಹಿಡಿದುಕೊಂಡು ಹಚ್ಚುವುದು ಬಿಡುವುದು ಇದೇ ಕೆಲಸ ಆಗಿದೆ.

ಮಾನ್ಯ ಸದಸ್ಯರು:- ನಾವು ಪವರ್ ಕೊಟ್ಟರೆ ಅವರಿಗೆ ಶಾಕ್ ಆಗುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಈ ರಾಜ್ಯದಲ್ಲಿ 2065 ಉರ್ದು ಶಾಲೆಗಳಿವೆ ಎಂದು ಹೇಳಿದ್ದಾರೆ. ಪ್ರೌಢ ಶಾಲೆಗಳು 181 ಎಂದು ಹೇಳಿದ್ದಾರೆ. ಕನ್ನಡವನ್ನು ಪ್ರಾಥಮಿಕ, ಪ್ರೌಢ ಶಿಕ್ಷಣ ಹಂತದಲ್ಲಿ ಕಲಿಯಲಿಕ್ಕೆ ಅಲ್ಪಸಂಖ್ಯಾತರು ಮುಂದೆ ಬರುತ್ತಿರುವುದರಿಂದ ಕನ್ನಡ ಶಿಕ್ಷಕರನ್ನು ನೇಮಿಸಬೇಕಾಗಿದೆ. ಆದರೆ ಇಂದು ಕನ್ನಡ ಶಿಕ್ಷಕರನ್ನು ನೇಮಿಸುವಲ್ಲಿ ವಿಳಂಬವಾಗಿದೆ. 7ನೇ ತರಗತಿ ಪರೀಕ್ಷೆಯನ್ನು ಪಬ್ಲಿಕ್ ಪರೀಕ್ಷೆ ಎಂದು ಘೋಷಣೆ ಮಾಡಿದ್ದಾರೆ. ಆದರಿಂದಾಗಿ ಶಿಕ್ಷಕರ ನೇಮಕವನ್ನು ಬೇಗನೆ ಮಾಡಬೇಕಾಗುತ್ತದೆ. ಈ ಶಿಕ್ಷಕರನ್ನು ನೇಮಕ ಮಾಡವಲ್ಲಿ ಬಹಳ ವಿಳಂಬವಾಗಿದೆ. ಜೊತೆಗೆ ಕನ್ನಡ ಕಲಿಯುವುದರ ಬಗ್ಗೆ ಹಾಗೂ ಪರೀಕ್ಷೆಗೆ ಕೂರುವ ಬಗ್ಗೆ ಹುಡುಗರಿಗೆ ಬಹಳ ತೊಂದರೆಯಾಗುತ್ತದೆ. 7ನೇ ತರಗತಿಗೆ ಪರೀಕ್ಷೆಗೆ ಕೂರುವ ಹುಡುಗರಿಗೆ ಬಹಳ ತೊಂದರೆಯಾಗುತ್ತದೆ. 7ನೇ ತರಗತಿಗೆ ಸಾರ್ವಜನಿಕ ಪರೀಕ್ಷೆಗಳಿಗೆ ಸರಕಾರ ಆದೇಶ ಮಾಡಿದೆ ಈ ಪರೀಕ್ಷೆಯಲ್ಲಿ ಫೇಲಾದಂತಹ ಹುಡುಗರು ಒಂದು ವರ್ಷ 8ನೇ ತರಗತಿಗೆ ಹೋಗುವ ಹಾಗಿಲ್ಲ. ಮತ್ತೆ 7ನೇ ತರಗತಿಯಲ್ಲಿ ವ್ಯಾಸಂಗ ಮಾಡಬೇಕಾಗುತ್ತದೆ. 2065 ಪ್ರಾಥಮಿಕ ಶಾಲೆ ಇರುವ ಜಾಗದಲ್ಲಿ 2650 ಶಿಕ್ಷಕರನ್ನು ಈಗ ನೇಮಿಸಿದ್ದಾರೆ. ಆದರೆ ಇವರು ಫುಲ್ ಟೈಂ ಟೀಚರ್ ಅಥವಾ ಗಂಟೆ ಗಂಟೆಗೆ ಪಾಠ ಹೇಳುವಂತಹ ಶಿಕ್ಷಕರೋ ಎಂದು ಅವರು ಉತ್ತರ ಕೊಡಬೇಕು. 1ನೇ ತರಗತಿಯಿಂದ 7ನೇ ತರಗತಿಯವರೆಗೆ ಒಂದೇ ಶಿಕ್ಷಕರನ್ನು ನಾವು ನೇಮಿಸಿದರೆ ಇನ್ನು ಅದರಲ್ಲಿ 54 ಶಿಕ್ಷಕರನ್ನು ನೇಮಿಸಬೇಕಾಗುತ್ತದೆ. ಅಷ್ಟು ಹುದ್ದೆಗಳು ಖಾಲಿ ಇದೆ. ಅದೇ ರೀತಿ ಪ್ರೌಢ ಶಾಲೆಗಳಲ್ಲೂ ಸಹ 381 ಶಿಕ್ಷಕರ ಹುದ್ದೆಯನ್ನು ಭರ್ತಿ ಮಾಡುವ ಜಾಗದಲ್ಲಿ ಕೇವಲ 54 ಶಿಕ್ಷಕರನ್ನು ಮಾತ್ರ ನೇಮಿಸಿದ್ದಾರೆ. ಹಾಗಾದರೆ ಈ ಮತೀಯ ಅಲ್ಪಸಂಖ್ಯಾತರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಮತ್ತು ಕನ್ನಡವನ್ನು ಕಲಿಯುವ ವಿಚಾರದಲ್ಲಿ ಆ ಮಕ್ಕಳಿಗೆ ಅನ್ಯಾಯವಾಗುತ್ತದೆಯೋ ಇಲ್ಲವೋ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಪ್ರಶ್ನೆ ಮಾಡುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮಾನ್ಯ ಶಾಸಕ ಸ್ನೇಹಿತರಿಗೆ ಒದಗಿಸಿರುವ ಮಾಹಿತಿ ಪ್ರಕಾರ 9 ಪ್ರಾಥಮಿಕ ಪಾಠಶಾಲೆಗಳಲ್ಲಿ ಕಡಿಮೆ ಇರತಕ್ಕಂತಹ ಉಪಾಧ್ಯಾಯರುಗಳನ್ನು ಕೂಡಲೇ ಅಂದರೆ ಈ ನಾಲ್ಕಾರು ದಿನಗಳಲ್ಲಿ ಪೋಸ್ಟಿಂಗ್ಸ್ ಆಗುತ್ತದೆ. ಇನ್‌ಕಂ ಸರ್ಟಿಫಿಕೇಟ್,

ಕ್ಯಾಸ್ಪ್ ಸರ್ಟಿಫಿಕೇಟ್ ಬಂದ ಕೂಡಲೇ ಮಾಡುತ್ತೇವೆ. ಅದೇ ರೀತಿ ಪ್ರೌಢ ಶಾಲೆಗಳಲ್ಲಿ ಸಹ ಎರಡು ಉಪಾಧ್ಯಾಯರುಗಳ ಭರ್ತಿಯಾಗುವ ಕೆಲಸ ಎಲ್ಲಾ ಆಗಿದೆ. ಇನ್‌ಕಂ ಸರ್ಟಿಫಿಕೇಟ್ ಕ್ಯಾಸ್ಪ್ ಸರ್ಟಿಫಿಕೇಟ್ ಬಂದ ತಕ್ಷಣ ಆಗುತ್ತದೆ. ಮಾನ್ಯ ಸ್ನೇಹಿತರು ಹೇಳಿದ ಹಾಗೆ 7 ನೇ ತರಗತಿಗೆ ಈ ವರ್ಷ ಪಬ್ಲಿಕ್ ಪರೀಕ್ಷೆ ಇರುವುದನ್ನು ನಾವು ಅರ್ಥ ಮಾಡಿಕೊಂಡು ಸರಕಾರ ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಿ 18700 ಉಪಾಧ್ಯಾಯರುಗಳನ್ನು ನೇಮಕ ಮಾಡಿ ಆ ಪೈಕಿ ಎಲ್ಲೆಲ್ಲಿ ಉರ್ದು ಶಾಲೆಗಳಿಗೆ ಕನ್ನಡ ಶಿಕ್ಷಕರ ಅವಶ್ಯಕತೆ ಇದೆ ಅಲ್ಲಿಗೆ ಭರ್ತಿ ಮಾಡುವ ಕಾರ್ಯಕ್ರಮವನ್ನು ಕೈಗೊಂಡಿರುವುದು ಮಾನ್ಯ ಸದಸ್ಯರಿಗೆ ಈಗಾಗಲೇ ಗೊತ್ತಿದೆ. ಈ ಬಗ್ಗೆ ಸರಕಾರ ಯಾವುದೇ ರೀತಿಯಲ್ಲಿ ಈ ವರ್ಷ 7 ನೇ ತರಗತಿಯ ಮಕ್ಕಳಿಗೆ ತೊಂದರೆಯಾಗದ ರೀತಿಯಲ್ಲಿ ತಂದೆತಾಯಿಗಳಿಗೆ ನೋವಾಗದ ಹಾಗೆ ಕ್ರಮ ತೆಗೆದು ಕೊಳ್ಳುತ್ತೇವೆ. 9 ಪ್ರಾಥಮಿಕ ಪಾಠಶಾಲೆಗಳಲ್ಲಿ ಕೂಡಲೇ ನೇಮಕವಾಗುತ್ತದೆ. ಉಳಿದಿರತಕ್ಕಂತಹ 9 ಉಪಾಧ್ಯಾಯರುಗಳು ಪ್ರೌಢ ಶಾಲೆಗಳಲ್ಲಿ ಎರಡನ್ನು ಕೂಡಲೇ ನೇಮಕ ಮಾಡಿ ಈ ವರ್ಷ 7 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡತಕ್ಕಂತಹ ಮಕ್ಕಳಿಗೆ ತೊಂದರೆಯಾಗದ ರೀತಿಯಲ್ಲಿ ಸರಕಾರ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಈ ರಾಜ್ಯದಲ್ಲಿ ಪ್ರೌಢ ಶಾಲೆ 181 ಇವೆ. ಸರಕಾರದವರು ನೇಮಿಸಿರುವಂಥಾದ್ದು ಕೇವಲ 54 ಶಿಕ್ಷಕರನ್ನು ನೇಮಿಸಿದ್ದಾರೆ. ಇನ್ನು ಉಳಿದ ಶಿಕ್ಷಕರನ್ನು ಯಾವಾಗ ನೇಮಿಸುತ್ತೀರಿ. ಈಗ ನೇಮಿಸಿರುವಂತಹ ಶಿಕ್ಷಕರು ಫುಲ್ ಟೈಂ ಕೆಲಸ ಮಾಡುತ್ತಾರೋ ಅಥವಾ 1 ರಿಂದ 7 ನೇ ತರಗತಿಯವರೆಗೆ....

ಅಧ್ಯಕ್ಷರು:- ಸರಿಯಾಗಿ ಉತ್ತರ ನೋಡಿಲ್ಲ. ರಾಜ್ಯದಲ್ಲಿ 181 ಪ್ರೌಢ ಶಾಲೆಗಳು ಇವೆ. ಮೊದಲಿನಿಂದ ಇರತಕ್ಕಂಥಾದ್ದು ಬೇರೆ ಹೊಸದಾಗಿ ನೇಮಕ ಆಗಿರತಕ್ಕಂಥಾದ 154. ಖಾಲಿ ಇರುವ ಕನ್ನಡ ಶಿಕ್ಷಕರ ಹುದ್ದೆಗಳು ಎರಡು ಎಂದು ಇದೆ. ಉರ್ದು ಪ್ರೌಢ ಶಾಲೆಗಳಲ್ಲಿ ಇಡೀ ರಾಜ್ಯದಲ್ಲಿ 2 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಆ ಎರಡನ್ನೂ ಭರ್ತಿ ಮಾಡಿದ್ದೇವೆಂದು ಮಂತ್ರಿಗಳು ಹೇಳಿದ್ದಾರೆ. ಮೊದಲೇ ಮಾಡಿರುವುದು ಇರುತ್ತದೆ.

199 ಶ್ರೀ ರಾಜಶೇಖರ ಶೀಲವಂತ ಗುಳೇದಗುಡ್ಡ :

ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದ ಗುಡ್ಡ ಮತಕ್ಷೇತ್ರ (3 ತಾಲ್ಲೂಕು ಸೇರಿ) ದಲ್ಲಿ ಯಾವ ಸ್ಥಳಗಳಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ;

ಆ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರುವ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಎಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು.)

ಅ) ಗುಳೇದಗುಡ್ಡ ಮತಕ್ಷೇತ್ರದಲ್ಲಿ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ವಿವರ ಕೆಳಕಂಡಂತೆ ಇರುವುದು.